ಅ) ಬಾದಾಮಿ ತಾಲ್ಲೂಕಿನ ಸೋಮನಕೊಪ್ಪ ಗ್ರಾಮದ ಪೂರ್ಣಾನಂದ ಮಠವು ಧಾರ್ಮಿಕ ದತ್ತಿ ಕಾಯಿದೆ ಪ್ರಕಾರ ನೋಂದಣಿಯಾಗಿದೆಯೇ?

ಆ) ನೋಂದಣಿಯಾಗಿದ್ದಲ್ಲಿ ಈ ಮಠಕ್ಕೆ ಇಲ್ಲಿಯವರೆಗೆ ಎಷ್ಟು ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

ಇ) ಬಿಡುಗಡೆ ಮಾಡಲಾಗಿರುವ ಹಣವನ್ನು ಬಳಕೆ ಮಾಡಲಾಗಿದೆಯೇ?

ಈ) ಹಣ ಬಳಕೆಯಾಗಿದ್ದಲ್ಲಿ ಮತ್ತೆ ಹಣವನ್ನು ಬಿಡುಗಡೆ ಮಾಡಲು ಇರುವ ತೊಂದರೆಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.

ಆ) ರೂ. 30,000-00 ಹಿಂದಿನ ಸಾಲಿನಲ್ಲಿ ಬಿಡುಗಡೆಯಾಗಿದ್ದು, 1990-91ನೇ ಸಾಲಿನಲ್ಲಿ ರೂ. 10,000-00 ಬಿಡುಗಡೆ ಮಾಡಲಾಗಿದೆ.

ಇ) ರೂ. 30,000-00 ಬಳಕೆ ಮಾಡಲಾಗಿದೆ.

ಈ) ಯಾವುದೇ ತೊಂದರೆಯಿಲ್ಲ.

ಬಾದಾಮಿ ಪುರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆಯ ಬಗ್ಗೆ

1732 - ಶ್ರೀ ಎಂ.ಕೆ. ಪಟ್ಟಣ ಶೆಟ್ಟಿ (ಬಾದಾಮಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕಿನ ಕೆರೂರಿನ ಸುಮಾರು 20,000 ಜನಕ್ಕೆ ಕುಡಿಯುವ ನೀರಿನ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ತೊಂದರೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರಿ ಕೆ.ಜಿ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಈ ಕೆಳಕಂಡ ಕಾಮಗಾರಿಗಳನ್ನು ದೊರಕುವ ಹಣ ಆಧಾರಿಸಿ ತೆಗೆದು ಕೊಳ್ಳಲಾಗುವುದು:

1) 3 ಹೆಚ್ಚುವರಿ ನೀರಿನ ಅಸರೆ ಇರುವ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪನ್ನು ಅಳವಡಿಸಿ ಅವುಗಳನ್ನು ವಿತರಣಾ ಕೊಳವೆ ಮಾರ್ಗಗಳಿಗೆ ಜೋಡಿಸುವುದು.

2) ಒಂದು ಲಕ್ಷ ಗ್ಯಾಲನ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರವನ್ನು ಕಟ್ಟುವುದು.

3) ಬೆಳಗಂಟಿ ಹಳ್ಳಿಗೆ ಒಂದು ಪರ್ಯಾಯ ನೀರಿನ ಕೊಳವೆ ಮಾರ್ಗವನ್ನು ಹಾಕಿ ನೀರು ಸರಬರಾಜು ಮಾಡುವುದು.

ಕೃಷಿ ಕಾರ್ಮಿಕ ಮಹಿಳೆಯರ ಹೆರಿಗೆ ಭತ್ಯೆ ಕುರಿತು

1763 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕಾರ್ಮಿಕ ಮಹಿಳೆಯರಿಗಾಗಿ ಕಾದಿರಿಸಿದ ಅನುದಾನವೆಷ್ಟು? (ಜಿಲ್ಲಾವಾರು, ವರ್ಷವಾರು,ಮೊಬಲಗು ವಿವರ)

ಅ) ಕಳೆದ 3 ವರ್ಷಗಳಲ್ಲಿ ಕಾದಿರಿಸಿದ ಹೆರಿಗೆ ಭತ್ಯೆ ಅನುದಾನದಲ್ಲಿ ಪ್ರಯೋಜನ ಪಡೆದ ಫಲಾನುಭವಿಗಳು ಎಷ್ಟು? ಮತ್ತು ಇದಕ್ಕೆ ತಗಲಿದ ವೆಚ್ಚವೆಷ್ಟು? (ವರ್ಷವಾರು, ಜಿಲ್ಲಾವಾರು ವಿವರ)

ಆ) ಗ್ರಾಮಗಳಲ್ಲಿ ಗ್ರಾಮಕರಣಿಕರ (ಗ್ರಾಮ ಲೆಕ್ಕಿಗರ) ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಕೊರತೆಯಿಂದ ಹೆರಿಗೆ ಭತ್ಯೆಯ ಫಲಾನುಭವಿಗಳಿಗೆ ಪ್ರಯೋಜನ ಪಡೆಯಲು ತೊಂದರೆಯಾಗಿರುವುದು ನಿಜವೇ?

ಈ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):

ಅ)

1987-88	1988-89	1989-90
	(ರೂ. ಲಕ್ಷಗಳಲ್ಲಿ)	
475-00	498-76	524-92

(ವಿವರಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ-ಎ)

ಆ)

1987-88	1988-89	1989-90
1,21,169	1,09,527	1,02,054

(ಅನುಬಂಧದಲ್ಲಿ ತಿಳಿಸಲಾಗಿದೆ-ಬಿ)

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಅನುಬಂಧ - ಎ

ಕ್ರಮ ಸಂಖ್ಯೆ	ಜಿಲ್ಲೆ	ಬಡ್ಜೆಟ್ ಅಲೋಕೆಷನ್		
		1987-1988	1988-89	1989-90
		ರೂ. ಲಕ್ಷಗಳಲ್ಲಿ		
1)	ಬೆಂಗಳೂರು (ಗ್ರಾಮಾಂತರ)	28.50	29.93	31.43
2)	ಬೆಂಗಳೂರು (ನಗರ)	19.00	19.93	25..00
3)	ಕೋಲಾರ	19.00	19.95	19.95
4)	ತುಮಕೂರು	23.75	24.94	26.19
5)	ಚಿತ್ರದುರ್ಗ	33.25	34.91	36.66
6)	ಶಿವಮೊಗ್ಗ	33.25	34.91	36.66
7)	ದಕ್ಷಿಣ ಕನ್ನಡ	19.00	19.95	20.00
8)	ಮೈಸೂರು	28.50	29.93	31.42
9)	ಮಂಡ್ಯ	19.00	19.95	20.25
10)	ಚಿಕ್ಕಮಗಳೂರು	19.00	19.95	20.95
11)	ಹಾಸನ	19.00	19.95	20.95
12)	ಬಳ್ಳಾರಿ	28.50	29.93	31.43
13)	ಬೀದರ್	19.00	19.95	20.95
14)	ಬಿಜಾಪುರ	28.50	29.93	31.43
15)	ಧಾರವಾಡ	28.50	29.93	31.43
16)	ಮಡಿಕೇರಿ	19.00	19.95	20.00
17)	ಬೆಳಗಾಂ	28.50	29.93	31.43

18)	ಗುಲ್ಬರ್ಗಾ	28.50	29.93	31.43
19)	ರಾಯಚೂರು	19.00	19.95	20.95
20)	ಕಾರವಾರ	14.25	14.96	15.71
	ಒಟ್ಟು	**475.00**	**498.76**	**524.92**

ಅನುಬಂಧ - ಬಿ

ಕ್ರಮ ಸಂಖ್ಯೆ	ಜಿಲ್ಲೆ	ಸೌಲಭ್ಯ ಪಡೆದವರ ಸಂಖ್ಯೆ		
		1987-1988	1988-89	1989-90
		ರೂ. ಲಕ್ಷಗಳಲ್ಲಿ		
1)	ಬೆಂಗಳೂರು (ಗ್ರಾಮಾಂತರ)	3,636	5,596	3,093
2)	ಬೆಂಗಳೂರು (ನಗರ)	2,801	4,643	1,979
3)	ಕೋಲಾರ	6,165	1,600	5,525
4)	ತುಮಕೂರು	11,385	5,625	2,025
5)	ಚಿತ್ರದುರ್ಗ	9,572	9,583	9,068
6)	ಶಿವಮೊಗ್ಗ	7,655	6,802	6,891
7)	ದಕ್ಷಿಣ ಕನ್ನಡ	4,737	6,304	4,740
8)	ಮೈಸೂರು	7,618	9,105	8,597
9)	ಮಂಡ್ಯ	6,166	5,165	6,983
10)	ಚಿಕ್ಕಮಗಳೂರು	4,026	5,780	1,160
11)	ಹಾಸನ	5,765	6,643	6.511
12)	ಬಳ್ಳಾರಿ	6,995	4,231	8,107
13)	ಬೀದರ್	7,306	5,178	1,253
14)	ಬಿಜಾಪುರ	14,579	4,829	7,020
15)	ಧಾರವಾಡ	7,525	6,320	7,841
16)	ಮಡಿಕೇರಿ	3,938	4,029	3,739
17)	ಬೆಳಗಾಂ	2,559	2,302	4,182
18)	ಗುಲ್ಬರ್ಗಾ	1,361	6,372	3,050
19)	ರಾಯಚೂರು	2,621	5,404	5,925
20)	ಕಾರವಾರ	4,557	4,226	4,095
	ಒಟ್ಟು	**1,21,169**	**1,09,527**	**1,02,054**

ದಾವಣಗೆರೆಯಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಯ ಹೊಸ ಕಟ್ಟಡ.

1679 - ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ನಗರದಲ್ಲಿ ಸಬ್‌ರಿಜಿಸ್ಟ್ರಾರ್ ಕಛೇರಿಗಾಗಿ ಸರ್ಕಾರದವರು ಹೊಸ ಕಟ್ಟಡ "ಮಿನಿವಿಧಾನಸೌಧ" ನಿರ್ಮಿಸಲು ಉದ್ದೇಶಿಸಿದೆಯೇ?

ಆ) ಸದರಿ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಸಿಬ್ಬಂದಿಯ ಹೆಚ್ಚಳ ಹಾಗೂ ಇತರೆ ಆಡಳಿತ ಸುಧಾರಣೆಯ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಹಾಗಿದ್ದಲ್ಲಿ ಮೇಲ್ಕಾಣಿಸಿದ ವಿಷಯಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?